ಜನಸಾಮಾನ್ಯರೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸರ್ಕಾರಗಳು ಜನರ ಮೇಲೆಯೇ ಜವಾಬ್ದಾರಿಯನ್ನು ಹೊರಿಸಿದ್ದವು. ದೇಶದಾದ್ಯಂತ ಕೈಗಾರಿಕೆಗಳು ಪ್ರಾರಂಭವಾಗಿದ್ದವು. ಹಳ್ಳಿಗಳಿಗೆ ಹಿಂತಿರುಗಿದ್ದ ಜನ ಒಬ್ಬೊಬ್ಬರೆ ಉದ್ಯೋಗ ಅರಸಿ ನಗರಗಳ ಕಡೆ ಮುಖಮಾಡತೊಡಗಿದರು. ಫ್ಯಾಕ್ಟರಿಯ ಸೂಪರ್ ವೈಸರ್ ಧರ್ಮ ಪಾಲ್ ಫೋನ್ ಮಾಡಿ ರಾಮ್ ಲಾಲನನ್ನು ಹತ್ತು ದಿನಗಳಲ್ಲಿ ಕೆಲಸಕ್ಕೆ ಹಾಜರಾಗಲು ತಿಳಿಸಿದ್ದರಲ್ಲದೆ, ರಾಮ್ ಲಾಲ್ ಹಾಜರಾಗದಿದ್ದ ಪಕ್ಷದಲ್ಲಿ ಅವನ ಕೆಲಸವನ್ನು ಬೇರೊಬ್ಬರಿಗೆ ಕೊಡುವುದಾಗಿಯೂ ಹೇಳಿದ್ದರು. ರಾಮ್ ಲಾಲ್ ಆ ಫ್ಯಾಕ್ಟರಿಯಲ್ಲಿ ಚನ್ನಾಗಿ ಹೊಂದಿಕೊಂಡಿದ್ದನಲ್ಲದೆ ಇನ್ನಾರು ತಿಂಗಳಲ್ಲಿ ಪ್ರೊಮೋಶನ್ ಕೊಟ್ಟು ಇಪ್ಪತ್ತು ಸಾವಿರ ವೇತನ ಕೊಡುವುದಾಗಿಯೂ ಸಹ ಮ್ಯಾನೇಜರ್ ಹೇಳಿದ್ದದ್ದು ನೆನಪಾಗಿ, ತಮ್ಮ ತಾರಾನಾಥನಿಗೆ ಇಪ್ಪತ್ತು ದಿನಗಳ ನಂತರ ಬರಲು ಹೇಳಿ ತಾನು ದಿಲ್ಲಿಗೆ ಪ್ರಯಾಣ ಬೆಳೆಸಿದ್ದ. ಮನೆಯ ಯಜಮಾನ ರಾಜುಭಯ್ಯಾ ಎರಡು ತಿಂಗಳ ರೂಮಿನ ಬಾಡಿಗೆ ಬೇಡವೆಂದು ಔದಾರ್ಯ ಮೆರೆದಿದ್ದ. ಆನಂದ ವಿಹಾರ್ ಬಸ್‌ಸ್ಟ್ಯಾಂಡ್ ಮೊದಲಿನಂತೆ ಜೀವಕಳೆ ತುಂಬಿಕೊಂಡಿರದೆ ಬಿಕೋ ಅನ್ನುತ್ತಿತ್ತು. ಊರುಗಳಿಗೆ ಹೋಗಿದ್ದ ಕಾರ್ಮಿಕರು ಹತ್ತದಿನೈದು ಪರ್ಸೆಂಟ್ ಮಾತ್ರ ಹಿಂತಿರುಗಿದ್ದರು. ರಾಮ್ ಲಾಲ್ ಲಗುಬಗೆಯಿಂದಲೇ ಫ್ಯಾಕ್ಟರಿಗೆ ಹೋಗಿದ್ದ. ಅರೆ, ಆನಂದಿ ಕೆಲಸ ಮಾಡುತ್ತಿದ್ದ ಪ್ಲಾಸ್ಟಿಕ್ ಫ್ಯಾಕ್ಟರಿ ಕೂಡ ಫ್ರಾರಂಭವಾತ್ತು. ಅಂದು ಸಂಜೆ ಬೇಗನೇ ಕೆಲಸ ಮುಗಿಸಿ ಪ್ಲಾಸ್ಟಿಕ್ ಫ್ಯಾಕ್ಟರಿಯ ಹತ್ತಿರ ಹೋಗಿದ್ದ. ಕೇವಲ ಮೂವತ್ತು ಪರ್ಸೆಂಟ್ ಕಾರ್ಮಿಕರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳಲಾಗಿತ್ತು. ಒಂದು ಪ್ರಯತ್ನವೆಂಬಂತೆ ಮ್ಯಾನೇಜರ್ ಹತ್ತಿರ ಹೋಗಿ ಆನಂದಿ ಬಗ್ಗೆ ವಿಚಾರಿಸಿದ್ದ. ರಾಮ್ ಲಾಲನನ್ನು ಮೇಲಿಂದ ಕೆಳಗಿನವರೆಗೂ ಒಂಥರಾ ನೋಡಿದ ಮ್ಯಾನೇಜರ್, "ಅರೆ ಭಯ್ಯಾ ಲಾಕ್ ಡೌನ್ ಆಗುವ ವಾರದ ಮೊದಲೇ ಆನಂದಿ ಕೆಲಸ ಬಿಟ್ಟಳು. ಅವಳ ತಾಯಿಯ ತಮ್ಮ ಮದುವೆ ಮಾಡಿಕೊಂಡು ಊರಿಗೆ ಕರೆದುಕೊಂಡು ಹೋದನಂತೆ. ವಾರದ ಹಿಂದೆ ಎಂಬತ್ತು ಸಾವಿರ ಪಿಎಫ್ ಹಣವನ್ನು ಅವರಮ್ಮ ಬಂದು ತೆಗೆದುಕೊಂಡು ಹೋದಳು. ಆನಂದಿಯಿಂದ ಏನಾಗಬೇಕಿತ್ತು..." ಎಂದು ಹೇಳಿದ್ದ. ರಾಮ್ ಲಾಲ್ ನಗುತ್ತಾ, "ಏನೂ ಇಲ್ಲ..." ಎಂದು ಹೇಳಿ ಫ್ಯಾಕ್ಟರಿಯಿಂದ ಹೊರ ಬಂದು, ನಡೆದುಕೊಂಡೇ ಆನಂದ ವಿಹಾರ್ ಕಡೆಗೆ ಹೊರಟ. ದಾರಿಯಲ್ಲಿ ಒಂದು ನರಪಿಳ್ಳೆಯೂ ಇಲ್ಲದೆ ತಾನೊಬ್ಬನೇ ನಡೆಯುತ್ತಿರುವವಂತೆ ಭಾಸವಾಗುತ್ತಿತ್ತು ರಾಮ್ ಲಾಲನಿಗೆ.


**ಕೇಶವರೆಡ್ಡಿ ಹಂದ್ರಾಳ**

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈ ತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.